ಪಡೆದಿರಲೇಬೇಕು. ನ್ಯಾನೋ ಅಂದರೆ 250 ಗ್ರಾಂಗಳಿಗಿಂತ ಕಡಿಮೆ ತೂಕವಿರುವ ಡ್ರೋನ್‌ಗಳಿಗೆ ನೋಂದಣಿ ಬೇಕಿಲ್ಲವಾದರೂ, ಇತರೆ ನಿಯಮಗಳು ಅನ್ವಯಿಸುತ್ತವೆ. ಇಲ್ಲಿ ಹಾರಿಸಲಾಗುವ ಡ್ರೋನ್‌ಗಳು ಜಿಪಿಎಸ್, ಆರ್‌ಟಿಎಚ್–ರಿಟರ್ನ್ ಟು ಹೋಂ, ಆಂಟಿಕೊಲಿಶನ್ ಲೈಟ್, ಗುರುತಿನ ಪ್ಲೇಟ್, ಫ್ಲೈಟ್ ಕಂಟ್ರೋಲರ್ ಮತ್ತು ಹಾರಾಟದ ವಿವರ ಶೇಖರಣೆ, ಆರ್ ಎಫ್ ಐಡಿ – ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಶನ್, ವ್ಯವಸ್ಥೆ ಹೊಂದಿರಲೇಬೇಕು.

- ಯಾವುದೇ ಹಾರಾಟ ಪ್ರಾರಂಭಿಸುವುದಕ್ಕೂ ಮುನ್ನ ಡ್ರೋನ್ ಪೈಲಟ್‌ಗಳು DGCಯ NPNT–No Permission, No take off ಎಂಬ ಮೊಬೈಲ್ ಅಪ್ಲಿಕೇಶನ್ ಬಳಸಿ ಪರವಾನಿಗೆ ಪಡೆಯಬೇಕು. ಪರವಾನಿಗೆ ಇದೆ ಅಥವಾ ಇಲ್ಲ ಎಂಬ ಸಂದೇಶ ಕೆಲವೇ ನಿಮಿಷಗಳಲ್ಲಿ ಬರುತ್ತದೆ.
- ನ್ಯಾನೋ ಡ್ರೋನ್‌ಗಳಾದರೆ 50 ಅಡಿ, ಮೈಕ್ರೋ ಡ್ರೋನ್‌ಗಳಾದರೆ 200 ಅಡಿವರೆಗೆ ಯಾವುದೇ ಪರವಾನಿಗೆ ಇಲ್ಲದೆ ಹಾರಿಸಬಹುದಾದರೂ ಇತರ ನಿಯಮಗಳಿಗೆ ಬದ್ಧವಾಗಿರಬೇಕಾಗುತ್ತದೆ. ಒಮ್ಮೆ ಪರವಾನಿಗೆ ಪಡೆದರೆ 5 ವರ್ಷಗಳು ನವೀಕರಣ ಮಾಡಬೇಕಾದ ಅವಶ್ಯಕತೆ ಇಲ್ಲ. 200 ಅಡಿಗಿಂತ ಹೆಚ್ಚು ಹಾರಾಟ ನಡೆಸಲು 25 ಸಾವಿರ ರೂಪಾಯಿ ಸಂದಾಯ ಮಾಡಿ ಮಾನವ ರಹಿತ ವೈಮಾನಿಕ ಹಾರಾಟ ಪರವಾನಿಗೆ (Unmanned Aerial Operator Permit – UAOP) ಪಡೆಯಬೇಕು.
- DGCಯ FTO ಫ್ಲೈಯಿಂಗ್ ಟ್ರೇನಿಂಗ್ ಆರ್ಗನೈಸೇಶನ್‌ನಿಂದ ತರಬೇತಿ ಪಡೆದು, ಇಂಗ್ಲೀಷ್ ಅನ್ನು ಭಾಷೆಯಾಗಿ ಕಲಿತು, SSLC ಶಿಕ್ಷಣ ಪೂರೈಸಿದವರು ಡ್ರೋನ್ ಹಾರಿಸಬಹುದು.
- ರಾತ್ರಿ ವೇಳೆ ಡ್ರೋನ್ ಹಾರಿಸುವಂತಿಲ್ಲ.
- ಅಂತರರಾಷ್ಟ್ರೀಯ ಗಡಿರೇಖೆಯಿಂದ 25 ಕಿ.ಮೀ. ದೂರದಲ್ಲಿ ಹಾರಾಟ ನಡೆಸಬಹುದು.
- ವಿಮಾನ ನಿಲ್ದಾಣಗಳ ಸುತ್ತಮುತ್ತಲಿನ 5 ಕಿ.ಮೀ. ವ್ಯಾಪ್ತಿಯಲ್ಲಿ ಡ್ರೋನ್ ಹಾರಿಸುವಂತಿಲ್ಲ.
- ನಿಯಮ ಉಲ್ಲಂಘಿಸಿದವರ ಪರವಾನಿಗೆ ರದ್ದು ಮಾಡುವುದಲ್ಲದೆ ಭಾರತೀಯ ದಂಡ ಸಂಹಿತೆಯ 287, 336, 337, 338 ಮತ್ತು ಭಾರತೀಯ ವಿಮಾನ ಕಾಯಿದೆ 1940ರ ಪ್ರಕಾರ ಭಾರೀ ದಂಡ ವಿಧಿಸಲಾಗುತ್ತದೆ.
- ಡ್ರೋನ್ ಹಾರಿಸುವ ತಂತ್ರಜ್ಞಾನದ ಜೊತೆಗೆ ಅದನ್ನು ನಿರ್ದಿಷ್ಟ ಸ್ಥಳಗಳಲ್ಲಿ ಹಾರಿಸಲು ಲೈಸೆನ್ಸ್ ಬೇಕು. ಅಮೆರಿಕದಲ್ಲಿ PART 107 ಮತ್ತು ಯುರೋಪಿನಲ್ಲಿ PFCO ಪ್ರಮಾಣಪತ್ರಗಳನ್ನು ಹೊಂದಿರುವವರು ಮಾತ್ರ ಡ್ರೋನ್ ಹಾರಾಟ ನಡೆಸಬಹುದು.
- ಸದ್ಯಕ್ಕೆ ಡಿಜಿಟಲ್‌ಸ್ಕೈ (ಭಾರತ ಸರ್ಕಾರ) ನಿಗದಿ ಮಾಡಿರುವ ಹಾರಾಟ ಮತ್ತು ನೋಂದಣಿ ನಿಯಮ ಪಾಲಿಸಲಾಗುತ್ತಿದೆ. ಇನ್ನೂ ಹೆಚ್ಚಿನ ಸುಧಾರಣೆ ಮತ್ತೆ ನಿರ್ವಹಣೆಗೆ ಬೆಲ್ಜಿಯಂ ದೇಶದ ಯುನಿಫ್ಲೈ ಮಾದರಿಯ ನಿಯಮಗಳನ್ನು ಅಳವಡಿಸಿಕೊಳ್ಳಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎನ್ನುವ 'ಟೆರ್ರಾ ಡ್ರೋನ್ ಇಂಡಿಯಾ'ದ ಪ್ರತೀಕ್ ಶ್ರೀವಾಸ್ತವ, 'ಕ್ಲೌಡ್ ಆಧಾರಿತ ತಂತ್ರಾಂಶ ಬಳಸುವುದರಿಂದ ಕಡಿಮೆ ಎತ್ತರದಲ್ಲಿ ಹಾರಾಡುವ ಡ್ರೋನ್‌ಗಳ ಭದ್ರತೆ ಮತ್ತು ಕಾನೂನು ಪಾಲನೆ ಎರಡಕ್ಕೂ ಅದರಲ್ಲಿ ವಿಪುಲ ಅವಕಾಶವಿದೆ' ಎಂದಿದ್ದಾರೆ.



ಗಾಟ್‌ವಿಕ್ ವಿಮಾನ ನಿಲ್ದಾಣದಲ್ಲಿ ದಿನವಿಡೀ ಡ್ರೋನ್‌ಗಳು ಕಾಣಿಸಿಕೊಂಡಿದ್ದರಿಂದ ಇಡೀ ಒಂದು ದಿನದ ಎಲ್ಲಾ ವಿಮಾನ ಹಾರಾಟವನ್ನು ಸ್ಥಗಿತಗೊಳಿಸಲಾಯಿತು. ಸುಮಾರು 1 ಲಕ್ಷದ 40 ಸಾವಿರ ಪ್ರಯಾಣಿಕರು ಪರದಾಟ ಅನುಭವಿಸಿದರು.

- 2015ರಲ್ಲಿ ಅಮೆರಿಕದ ಮೆಕ್ಸಿಕೊ ಗಡಿಯ ಬಳಿ 9 ಕೆ.ಜಿ. ತೂಕದ ಮೆಟಾಫೆಟಾಮೈನ್ ಎಂಬ ಮಾದಕ ಪದಾರ್ಥ ಸಾಗಿಸುತ್ತಿದ್ದ ಡ್ರೋನ್ ಅಪಘಾತಕ್ಕೀಡಾಗಿತ್ತು.
- ಲಾಸ್ ಏಂಜಲೀಸ್‌ನ ಬಳಿಯ ವೆಸ್ಟ್ ಹಾಲಿವುಡ್ ಪಟ್ಟಣದ ವಿದ್ಯುತ್ ತಂತಿಯ ಮೇಲೆ ಡ್ರೋನ್ ಬಿದ್ದದ್ದರಿಂದ ಊರಿನ ವಿದ್ಯುತ್ ಸಂಪರ್ಕ ಮೂರು ತಾಸುಗಳವರೆಗೆ ಕಡಿತಗೊಂಡಿತ್ತು.
- 2014ರಲ್ಲಿಕ್ರಿಶ್ಚಿಯನ್ ಡೆಮಾಕ್ರಟಿಕ್ ಪಕ್ಷದ ಪರ ಪ್ರಚಾರ ಮಾಡುತ್ತಿದ್ದ ಜರ್ಮನಿಯ ಚಾನ್ಸೆಲರ್ ಅಂಜೆಲ್ ಮಾರ್ಕೆಲ್ ಮೇಲೆ ಡ್ರೋನ್ ಒಂದು ಆಯತಪ್ಪಿ ಬಿದ್ದಿತ್ತು. ಅದು ಅವರನ್ನು ಕೊಲ್ಲುವ ಪ್ರಯತ್ನ ಎಂದು ಮೊದಮೊದಲು ಆತಂಕ ಹುಟ್ಟಿಸಿತ್ತಾದರೂ, ನಂತರ ಅದರಲ್ಲಿ ಯಾವುದೇ ಅಸ್ತ್ರವಿರಲಿಲ್ಲ ಎಂದು ತಿಳಿಯಿತು. ಜುಲೈ 2014ರಲ್ಲಿ ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣದಿಂದ ಹಾರಲು ಸಿದ್ಧವಾಗುತ್ತಿದ್ದ 'ಏರ್‌ಬಸ್ A 320'ಕ್ಕೆ ತೀರಾ ಹತ್ತಿರ ಬಂದಿದ್ದ ಡ್ರೋನ್ ಭಾರೀ ಅಪಘಾತವುಂಟು ಮಾಡುವ ಆತಂಕ ಹುಟ್ಟಿಸಿದ್ದನ್ನು ಬಿಬಿಸಿ ವರದಿ ಮಾಡಿತ್ತು.
- ನೆದರ್‌ಲೆಂಡ್‌ನ ಪ್ರಾಣಿ ಸಂಗ್ರಹಾಲಯದಲ್ಲಿದ್ದ ಚಿಂಪಾಂಜಿಯ